**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ತೇಜಸ್ವಿನಿ ಗೌಡ, ಇವರು ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 153 - "ದೇಶದಲ್ಲಿಯೇ ಅತೀ ಹೆಚ್ಚು ದಟ್ಟ ಅರಣ್ಯಗಳಲ್ಲಿ ಅತಿ ಹೆಚ್ಚು ಆನೆ ಸಂತತಿಯನ್ನು ಹೊಂದಿರುವ ಕೀರ್ತಿ ಕರ್ನಾಟಕಕ್ಕಿದೆ. ಕಾಡಿನಂಚಿನಲ್ಲಿರುವ ರೈತರ ಕೃಷಿ ಹೊಲಗದ್ದೆ, ತೋಟಗಳಿಗೆ ನುಗ್ಗಿ ಬೆಳೆ ಹಾನಿ ಹಾಗೂ ಜೀವಹಾನಿ ಮಾಡುವ ಕಾಡಾನೆಗಳನ್ನು ಸೆರೆಹಿಡಿಯುವ ಅಪಾಯಕಾರಿ ಕಾರ್ಯಾಚರಣೆಯು ಅರಣ್ಯ ಇಲಾಖೆಯ ನಿರಂತರ ಕರ್ತವ್ಯವಾಗಿದೆ. ಅತ್ಯಂತ ಕಠಿಣವಾದ ದುರ್ಗಮ ಕಾಡುಗಳಲ್ಲಿ ಮದವೇರಿ ಲಗ್ಗೆ ಇಡುವ ಕಾಡಾನೆಗಳನ್ನು ಹಿಡಿಯಲು ನಮ್ಮ ನುರಿತ ಅನುಭವಿ ಧೈರ್ಯಶಾಲಿ ಆನೆಗಳ ಜೊತೆಗೆ ಉನ್ನತ ಅಧಿಕಾರಿಗಳು, ಅರಣ್ಯ ರಕ್ಷಕ ಗಾರ್ಡ್‌ಗಳು, ವನ್ಯಜೀವಿ ವೈದ್ಯರು ಹಾಗೂ ಅರಣ್ಯ ಸಂರಕ್ಷಕ ಅಧಿಕಾರಿಗಳು ಸಾಕಾನೆಯ ಮಾವುತರು ಹಾಗೂ ಕಾವಾಡಿಗರು, Sharp shooter (ಗುರಿಗಾರರು) ಭಾಗವಹಿಸುತ್ತಾರೆ. ಆದರೆ ಅನೇಕ ಸಾರಿ ನಮ್ಮ ಅರಣ್ಯ ಸಿಬ್ಬಂದಿಯ ಲೆಕ್ಕಾಚಾರ ಯೋಜನೆ ಮೀರಿ, ಕಾಡಾನೆಗಳು ಮದವೇರಿ ಕಾರ್ಯಾಚರಣೆಯಲ್ಲಿನ ಸಾಕಾನೆಗಳು ಹಾಗೂ ಸಿಬ್ಬಂದಿಯ ಮೇಲೆರಗಿ ಪ್ರಾಣಾಪಾಯ ಉಂಟು ಮಾಡುತ್ತವೆ. ಹೀಗಾಗಿ ಇಂತಹ ನಿರೀಕ್ಷಿತ ಅಪಾಯದಿಂದ ನಮ್ಮ ಅಮೂಲ್ಯ ಸಾಕಾನೆಗಳು ಹಾಗೂ ಸಿಬ್ಬಂದಿಯ ರಕ್ಷಣೆ ಪರಿಹಾರ ಹಾಗೂ ಸೂಕ್ತ ಭದ್ರತೆ ಅಗತ್ಯ ಕುರಿತು" ವಿಷಯಕ್ಕೆ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ.**

*****

2023ರ ನೇರ ವೀಕ್ಷಣೆಗಳಿಂದ ಮಾಡಲಾದ ಆನೆಗಣತಿ ಪ್ರಕಾರ ರಾಜ್ಯವು 6395 ಆನೆಗಳನ್ನು ಹೊಂದಿದ್ದು, ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ಮಾನವ-ಆನೆ ಸಂಘರ್ಷ ನಿಯಂತ್ರಣ ಭಾಗವಾಗಿ ಅರಣ್ಯದಂಚಿನಲ್ಲಿರುವ ರೈತರ ಕೃಷಿ ಹೊಲಗದ್ದೆ, ತೋಟಗಳಿಗೆ ನುಗ್ಗಿ ಬೆಳೆ ಹಾನಿ ಹಾಗೂ ಜೀವಹಾನಿ ಮಾಡುವ ಕಾಡಾನೆಗಳನ್ನು ಇಲಾಖಾ ಆನೆ ಶಿಬಿರದಲ್ಲಿರುವ ಕುಮ್ಕಿಗಳು, ಆನೆ ಮಾವುತ /ಕಾವಾಡಿಗಳು ತಜ್ಞ ಪಶುವೈದ್ಯಾಧಿಕಾರಿಗಳು, ಅರವಳಿಕೆ ತಜ್ಞರು ಹಾಗೂ ಇಲಾಖಾ ಕ್ಷೇತ್ರ ಸಿಬ್ಬಂದಿಗಳೊಂದಿಗೆ ಹೊರಗುತ್ತಿಗೆ ಆಧಾರಿತ ನೌಕರರನ್ನು ಬಳಸಿಕೊಂಡು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಯನ್ವಯ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಸೆರೆಹಿಡಿಯುವ ಕಾರ್ಯಾಚರಣೆಯನ್ನು ಪರಿಣಾಮಕಾರಿಯಾಗಿ ನಡೆಸಲಾಗುತ್ತದೆ. ರಾಜ್ಯದಲ್ಲಿ ಮಾನವ-ಆನೆ ಸಂಘರ್ಷಕ್ಕೆ ಕಾರಣವಾದ ಕಾಡಾನೆಗಳನ್ನು ನಿರ್ದಿಷ್ಟವಾಗಿ ಗುರುತಿಸಿ, ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು 72 ಕಾಡಾನೆಗಳನ್ನು ಸೆರೆಹಿಡಿದು, ವಾಸ್ತವ ಸ್ಥಿತಿಗೆ ಅನುಗುಣವಾಗಿ ರೇಡಿಯೋ ಕಾಲರ್ ಅಳವಡಿಸಿ, ಸೂಕ್ತ ಆವಾಸಸ್ಥಾನಕ್ಕೆ ಬಿಡಲಾಗಿರುತ್ತದೆ. ಕೆಲವು ಸೆರೆಹಿಡಿದ ಕಾಡಾನೆಗಳನ್ನು ಇಲಾಖಾ ಆನೆ ಶಿಬಿರಗಳಿಗೆ ಸ್ಥಳಾಂತರಿಸಿ ಪೋಷಿಸಲಾಗುತ್ತಿದೆ.

ಸಾಕಷ್ಟು ಮುಂಜಾಗ್ರತ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದಾಗ್ಯೂ, ಕೆಲವೊಂದು ಸಂದರ್ಭಗಳಲ್ಲಿ ನಿಯಂತ್ರಣ ಮೀರಿ ಆಕಸ್ಮಿಕ ಘಟನೆಗಳು ಸಂಭವಿಸುತ್ತವೆ. ಇಂತಹ ಮಾನವ ವನ್ಯಪ್ರಾಣಿ ಸಂಘರ್ಷದಲ್ಲಿ ಮೃತರಾಗುವ ಕರ್ತವ್ಯ ನಿರತ ಹೊರಗುತ್ತಿಗೆ ಮತ್ತು ತಾತ್ಕಾಲಿಕ ಸಿಬ್ಬಂದಿಗಳಿಗೆ ಸರ್ಕಾರದ ಆದೇಶ ಇ-ಸಂಖ್ಯೆ ಅಪಜೀ/101/ಎಫ್‌ಎಪಿ/2023, ಬೆಂಗಳೂರು, ದಿನಾಂಕಃ 10.10.2023 ರನ್ವಯ ರೂ.25.00 ಲಕ್ಷಗಳ ದಯಾತ್ಮಕ ಧನವನ್ನು ಕಾನೂನುಬದ್ಧ ಮೃತರ ವಾರಸುದಾರರಿಗೆ ಪಾವತಿಸಲಾಗುತ್ತದೆ.

ಅಲ್ಲದೇ, ಇತ್ತೀಚೆಗೆ ಹಾಸನ ಅರಣ್ಯ ವಿಭಾಗದ ಆಲೂರು, ಬೇಲೂರು, ಸಕಲೇಶಪುರ ಮತ್ತು ಯಸಳೂರು ವಲಯಗಳ ವ್ಯಾಪ್ತಿಯಲ್ಲಿ ಉಪಟಳ ನೀಡುತ್ತಿರುವ ಕಾಡಾನೆಗಳಿಗೆ ರೇಡಿಯೋ ಕಾಲರ್ ಅಳವಡಿಸುವ ಮತ್ತು ಸೆರೆಹಿಡಿದು ಸ್ಥಳಾಂತರಿಸುವ ಕಾರ್ಯಾಚರಣೆಯಲ್ಲಿ ಮೈಸೂರು ದಸರಾ ಮಹೋತ್ಸವದಲ್ಲಿ ಅಂಬಾರಿ ಹೊರುತ್ತಿದ್ದ "ಅರ್ಜುನ" ಆನೆ ಸಾವಿನ ಕುರಿತು ತನಿಖೆ ನಡೆಸಲು ಹಾಗೂ ಆನೆಗಳನ್ನು ಸೆರೆಹಿಡಿದು ಸ್ಥಳಾಂತರಿಸುವ ಕಾರ್ಯಾಚರಣೆ ವೇಳೆ ಇಲಾಖಾ ಸಿಬ್ಬಂದಿ ಹಾಗೂ ಕುಮ್ಕಿ ಆನೆಗಳ ಸುರಕ್ಷತೆಗಾಗಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ವಿಶ್ಲೇಷಿಸಿ ವರದಿ ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ: ಅಪಜಿ/163/ಎಫ್‌ಡಬ್ಲ್ಯೂಎಲ್/2023, ಬೆಂಗಳೂರು ದಿನಾಂಕಃ 08.01.2023 ರಂದು ತಜ್ಞರ ಸಮಿತಿಯನ್ನು ರಚಿಸಲಾಗಿರುತ್ತದೆ ತಜ್ಞರ ಸಮಿತಿಯ ಶಿಫಾರಸ್ಸಿನ ಅನ್ವಯ ಪ್ರಮಾಣಿತ ಕಾರ್ಯಾಚರಣೆಯ ವಿಧಾನ(Standard Operating Procedure)ವನ್ನು ಅಂತಿಮಗೊಳಿಸಿ, ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡಿ, ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಕ್ರಮ ವಹಿಸಲಾಗುತ್ತದೆ.

**ಸಂಖ್ಯೆ: ಅಪಜೀ 166 ಎಫ್‌ಡಬ್ಲ್ಯೂಎಲ್ 2023**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು